**ದಿಃ-15-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿಸವಾಲು : ಎದುರುದಾರರ ಪರ ಶ್ರೀ. ವಿ.ಎಸ್ ವಕೀಲರಿಂದ :**

1. ನಾನು ಹಾಕಿದ ದಾವೆಯ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಅದೇ ರೀತಿ ನನಗೆ ಮೂಲ ದಾವಾ ಸಂಖ್ಯೆ 6019/2005 ರ ಬಗ್ಗೆ ಮಾಹಿತಿ ಇದೆ. ಆ ದಾವೆಯನ್ನು ಮಿಡೀಯೇಷನ್ ಗೆ ಕಳಿಸಿಕೊಡಲಾಗಿತ್ತು.

2. ಮೂಲ ದಾವಾ ಸಂಖ್ಯೆ 6019/2005 ರಲ್ಲಿ ನಾನು, ನರಸಪ್ಪ ರೆಡ್ಡಿ , ನೀಲಮ್ಮ, ಎನ್.ಹೇಮಚಂದ್ರ, ನಾಗರಾಜು, ಜಯಮ್ಮ, ವಿವೇಕ ರೆಡ್ಡಿರವರು ಪಕ್ಷಗಾರರಾಗಿರುತ್ತೇವೆ.

3. ನಾನು 1998 ರಲ್ಲಿ ಬಿಎಸ್.ಸಿ, ಇಲೆಕ್ಟ್ರಾನಿಕ್ಸ್ ನಲ್ಲಿ ಪದವಿಧರಳಾಗಿರುತ್ತೇನೆ. ಎನ್.ಹೇಮಚಂದ್ರ ನನ್ನ ಗಂಡನಾಗಬೇಕು. ಅವರ ಜೊತೆ ದಿನಾಂಕ 07.02.2000 ದಂದು ಮದುವೆಯಾಗಿರುತ್ತದೆ. ಅವರು ಸಿವಿಲ್ ಇಂಜಿನಿಯರ್ ವಿದ್ಯಾಭ್ಯಾಸ ಮಾಡಿರುತ್ತಾರೆ. ಅವರು ಯಾವಾಗ ವಿದ್ಯಾಭ್ಯಾಸ ಮುಗಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರು ಸಿವಿಲ್ ಇಂಜಿನಿಯರಿಂಗ್ ಮಾಡಿದ ನಂತರ ಕನ್ಸ್ ಟ್ರಕ್ಷನ್ ವಿಭಾಗದಲ್ಲಿ ಕೆಲಸ ಮಾಡಿದ್ದರು. ಅವರಿಗೆ 2010 ನೇ ಇಸವಿಯಲ್ಲಿ ಸುಮಾರು ಒಂದೂವರೆ ಕೋಟಿ ವಾರ್ಷಿಕ ಆದಾಯವಿತ್ತು. ನನ್ನ ಗಂಡ ಆದಾಯ ತೆರಿಗೆಯನ್ನು ಕಟ್ಟುತ್ತಿದ್ದರು ಎಂದರೆ ಸರಿ.

4. ಸಾಕ್ಷಿಗೆ ಈಗ ದಿನಾಂಕ 11.09.2022 ರಂದು ಅರ್ಜಿದಾರರ ವಕಾಲತುನಾಮೆಯನ್ನು ತೋರಿಸಿ ಇದರಲ್ಲಿರುವ ಸಹಿ ಯಾರದೆಂದು ಕೇಳಲಾಗಿ ಅದರಲ್ಲಿ ನನ್ನ ಗಂಡನ ಸಹಿ ಇದೆ ಎಂದು ನುಡಿಯುತ್ತಾರೆ. ವಕೀಲರು ಅದನ್ನು ಗುರುತಿಸಲು ಕೇಳಲಾಗಿ ಸಾಕ್ಷಿಯು ಆ ಸಹಿಯನ್ನು ಗುರುತಿಸಿದ್ದರಿಂದ ಆ ವಕಾಲತುನಾಮೆಯನ್ನು **ನಿ.ಆರ್.1** ಮತ್ತು ಸಹಿಯನ್ನು **ನಿ.ಆರ್.1(ಎ)** ಎಂದು ಗುರುತಿಸಲಾಯಿತು.

5. ಅದೇ ರೀತಿ ನನ್ನ ಗಂಡ ಪ್ರಸ್ತುತ ಈ ಪ್ರಕರಣದ ಅರ್ಜಿಯಲ್ಲಿಯೂ ಸಹಿ ಹಾಕಿದ್ದಾರೆ ಎಂದರೆ ಸರಿ. ಅದೇ ರೀತಿ ನನ್ನ ಗಂಡ ಕಾಂಪ್ರಮೈಸ್ ಪಿಟೀಷನ್ ನಲ್ಲೂ ಸಹ ಸಹಿಯನ್ನು ಹಾಕಿದ್ದಾರೆ ಎಂದರೆ ಸರಿ.

6. ಕೇಸಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆ ದಾಖಲೆಗಳನ್ನು ಬಿಟ್ಟು ಬೇರೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಿಕ್ಕೆ ಇಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

7. 2011 ರಲ್ಲಿ ನನ್ನ ಗಂಡನ ವಯಸ್ಸು 42 ವರ್ಷ. ನರಸಪ್ಪ ರೆಡ್ಡಿಯವರು ನನ್ನ ಮಾವ ನೀಲಮ್ಮ ನನ್ನ ಅತ್ತೆ ಮತ್ತು ಅವರಿಗೆ ಮೂರು ಜನ ಮಕ್ಕಳು. ಅವರು ನನ್ನ ಗಂಡ, ಮಮತಾ ಮತ್ತು ಪದ್ಮಾರವರಾಗಿರುತ್ತಾರೆ.

8. ಮದುವೆಗಿಂತ ಮೊದಲು ನನ್ನ ಗಂಡ ಮಾಡಿದ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇದೆ. ಸಾಕ್ಷಿ ಮುಂದುವರಿದು ನಾನು ಎಲ್ಲಾ ಕೇಸಿನ ಬಗ್ಗೆ ಕಡತವನ್ನು ಪಡೆದ ನಂತರ ಎಲ್ಲಾ ಮಾಹಿತಿಗಳನ್ನು ನಾನು ಪಡೆದುಕೊಂಡಿರುತ್ತೇನೆ.

9. ಸರ್ವೇ ನಂ.81/2 ಇ, ಕೊತ್ತನೂರು ಗ್ರಾಮದ ಸ್ವತ್ತಿನ ಬಗ್ಗೆ ನನಗೆ ಮಾಹಿತಿ ಇದೆ. ಅದು ನನ್ನ ಗಂಡನ ತಾತನವರ ಸ್ವಯಾರ್ಜಿತ ಆಸ್ತಿಯಾಗಿದ್ದು ಅದರಲ್ಲಿ ಒಟ್ಟು 8 ಎಕರೆ ಜಾಗವಿತ್ತು. ಈಗ ಅದರಲ್ಲಿ 8 ಎಕರೆ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅದರಲ್ಲಿ ಈಗ 3 ಎಕರೆ 36 ಗುಂಟೆ ಇರುತ್ತದೆ ಎಂದು ನುಡಿಯುತ್ತಾರೆ. ಪ್ರಸ್ತುತ ಆ ಜಾಗದಲ್ಲಿ ಕಟ್ಟಿದ ಕಟ್ಟಡದ ವಿಸ್ತೀರ್ಣ ಒಟ್ಟು 30,000 ಚದರ ಅಡಿ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು 10,000 ಚದರ ಅಡಿಯಲ್ಲಿ ಮರಗಳು, ನಿಲುಗಡೆ ಸ್ಥಳ ಇತ್ಯಾದಿ ಇರುತ್ತವೆ ಎಂದು ನುಡಿಯುತ್ತಾರೆ.

10. ಮೊದಲ ಭೋಗ್ಯದ ಕರಾರನ್ನು 1994 ರಲ್ಲಿ ಮಾಡಿರುತ್ತಾರೆ. ಮೊದಲ ಭೋಗ್ಯದ ಕರಾರು ದಿನಾಂಕ 05.03.1997 ರಂದು ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದ 1997 ರಲ್ಲಿಯೂ ಸಹ ಒಂದು ಕರಾರು ಆಗಿರುತ್ತದೆ ಎಂದು ನುಡಿಯುತ್ತಾರೆ. 1997 ರಲ್ಲಿ ಆದ ಕರಾರಿನಲ್ಲಿ ಎನ್.ನರಸಪ್ಪ ರೆಡ್ಡಿ, ನೀಲಮ್ಮ ಮತ್ತು ನನ್ನ ಗಂಡ ಮತ್ತು ನಾಗರಾಜ ರೆಡ್ಡಿ ಜಯಮ್ಮ ಮತ್ತು ವಿವೇಕ್ ರವರು ಪಕ್ಷಗಾರರಾಗಿದ್ದರು. ಅವರುಗಳು ಐಟಿಎಂ ಜೊತೆ ಭೋಗ್ಯದ

ಕರಾರನ್ನು ಮಾಡಿರುತ್ತಾರೆ. 1997 ರಲ್ಲಿ ಹಿಂಪಡೆಯುವ ಠೇವಣಿಯು ನಮೂದಾಗಿತ್ತು. ಹಿಂಪಡೆಯುವ ಠೇವಣಿ ಒಟ್ಟಾಗಿ ಏಳುವರೆ ಲಕ್ಷ ಮಾತ್ರ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ದಾಖಲೆಗಳನ್ನು ನೋಡಿ ಹೇಳಬಹುದು ಎಂದು ನುಡಿಯುತ್ತಾರೆ. 1994 ನೇ ಇಸವಿಯಲ್ಲಿಯೇ ರೂ.1,00,000/- ಬಾಡಿಗೆ ನಿಗದಿಯಾಗಿತ್ತು.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**